ಎಲ್.ಎ.ಸಿ ನಂಃ 334/2019
ಪಿ.ಡಬ್ಲೂ ನಂಃ 01

**<u>ದಿನಾಂಕ 04.03.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ಮಾನ್ಯ ಡಿ ಜಿ ಪಿ ಯವರಿಂದ 1ನೇ ಪ್ರತಿವಾದಿ ಪರವಾಗಿಃ -</u>**

ಬಡಚಿ ಗ್ರಾಮ ಅಥಣಿಯಿಂದ ಸುಮಾರು 4-5 ಕಿ.ಮೀ ದೂರದಲ್ಲಿದೆ ಎಂದರೆ ಸರಿ. ನಮ್ಮದು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಹಳ್ಳಿ ಎಂದರೆ ಸರಿ. ನನ್ನ ಜಮೀನು ಸ್ವಾಧೀನಗೊಳ್ಳುವ ಮೊದಲು ಅಧಿಸೂಚನೆಯಾಗಿ ನಮಗೆ ನೋಟಿಸ ಬಂದಿರುತ್ತದೆ ಎಂದರೆ ಸರಿ. ಭೂಸ್ವಾಧೀನಾಧಿಕಾರಿಗಳು ಮತ್ತು ಸರ್ವೆ ಅಧಿಕಾರಿಗಳು ಎಲ್ಲರೂ ಬಂದು ನಮ್ಮ ಜಮೀನನ್ನು ಪರಿವೀಕ್ಷಣೆ ಮಾಡಿ ಸರ್ವೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಮ್ಮ ಜಮೀನನ್ನು ಪರಿವೀಕ್ಷಣೆ ಮಾಡಿ ಅದರಲ್ಲಿರುವ ಫಲವತ್ತತೆ ಮತ್ತು ಮಣ್ಣಿನ ಗುಣದ ಮೇಲೆ ಪರಿಹಾರ ಹಣ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-3 ರಿಂದ 5 ಖರೀದಿ ಪತ್ರಗಳು ಖಸಬಾ ಅಥಣಿ ವ್ಯಾಪ್ತಿಗೆ ಒಳಪಟ್ಟಿರುತ್ತವೆ ಎಂದರೆ ಸರಿ. ನಿಪಿ-6 ಮತ್ತು ನಿಪಿ-7 ಖರೀದಿ ಕರಾರು ಪತ್ರದ ಜಮೀನುಗಳು ಖರೀದಿಯಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-3 ರಿಂದ 5 ಖರೀದಿ ಪತ್ರದ ಜಮೀನುಗಳು ಹಾಗೂ ನಿಪಿ-6 ಮತ್ತು ನಿಪಿ-7 ಖರೀದಿ ಕರಾರು ಪತ್ರಗಳ ಜಮೀನುಗಳು ಹಾಗೂ ನಿಪಿ-8 ಆದೇಶಕ್ಕೆ ಸಂಬಂಧಿಸಿದ ಜಮೀನು ಮತ್ತು ನಮ್ಮ ಜಮೀನು ಒಂದೇ ಗುಣಮಟ್ಟದ ಜಮೀನುಗಳು ಎಂದು ತೋರಿಸಲು ತಜ್ಞರಿಂದ ಮಣ್ಣು ಪರೀಕ್ಷಿಸಿ ಯಾವುದೇ ವರದಿ ಸಲ್ಲಿಸಿರುವುದಿಲ್ಲ. ನಿಪಿ-9 ಅಥಣಿ ತಾಲೂಕು ನಕಾಶೆಯಲ್ಲಿ ಗ್ರಾಮಗಳ ನಡುವಿನ ಅಂತರ ಕಂಡುಬರುವುದಿಲ್ಲ ಎಂದರೆ ಸರಿ. ಭೂಸ್ವಾಧೀನಾಧಿಕಾರಿಗಳು ನೀಡಿದ ಪರಿಹಾರ ಸರಿಯಾಗಿದ್ದು ಹೆಚ್ಚಿನ ಪರಿಹಾರ ಪಡೆಯಲು ಖೊಟ್ಟಿ ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಳ್ಳಿಗಳಲ್ಲಿ ಬಡ್ಡಿಸಾಲ ಕೊಡುವ ಸಂದರ್ಭದಲ್ಲಿ ಜಮೀನುಗಳಿಗೆ ಸಂಬಂಧಿಸಿದ ಖರೀದಿ ಕರಾರು ಪತ್ರ ಮಾಡುವ ಪದ್ಧತಿ ಇರುತ್ತದೆ ಎಂದರೆ ಸರಿ. ನಿಪಿ-6 ಮತ್ತು ನಿಪಿ-7 ಖರೀದಿ ಕರಾರು ಪತ್ರಗಳು ಬಡ್ಡಿಸಾಲ ವ್ಯವಹಾರ ಸಲುವಾಗಿ ಮಾಡಿಕೊಂಡವು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-6 ಮತ್ತು ನಿಪಿ-7 ಖರೀದಿ ಕರಾರು ಪತ್ರಗಳು ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಜಮೀನನ್ನು ಸ್ವಾಧೀನಪಡಿಸಿಕೊಂಡ ಅಧಿಸೂಚನೆಯ ನಂತರ ನನಗೆ ನೋಟಿಸ ಜಾರಿ ಮಾಡಿದ್ದರು ಎಂದರೆ ಸರಿ. ನನ್ನ ಜಮೀನು ನೀರಾವರಿ ಜಮೀನು ಇರುತ್ತದೆ ಎಂದು ಹೇಳಿ 1ನೇ ಪ್ರತಿವಾದಿಯವರ ಸಮಕ್ಷಮ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ, ತಕರಾರು ಸಲ್ಲಿಸಲು ಯಾವುದೇ

ತೊಂದರೆ ಇಲ್ಲ. 1ನೇ ಪ್ರತಿವಾದಿ ಅಧಿಕಾರಿಗಳು ನಮ್ಮ ಜಮೀನಿಗೆ ಬಂದು ಜಮೀನಿನ ಮಣ್ಣು ಪರೀಕ್ಷಿಸಿ ಸೂಕ್ತ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಸರಿಯಲ್ಲ.

<u>ಪಾಟಿ **ಸವಾಲುಃ 2ನೇ ಪ್ರತಿವಾದಿ ಪರವಾಗಿ ಶ್ರೀ ಎ ಎನ್ ಪಿ ವಕೀಲರಿಂದಃ**</u>

ಭೂಸ್ವಾಧಿನಾಧಿಕಾರಿಗಳು ಜಂಟಿ ಮೋಜಣಿ ಸಮಯದಲ್ಲಿ ನನಗೆ ನೋಟಿಸ ಜಾರಿ ಮಾಡಿರುತ್ತಾರೆ. ಜಂಟಿ ಮೋಜಣಿ ಸಮಯದಲ್ಲಿ ನನ್ನ ಜಮೀನಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಕೇಳಿಲ್ಲ. ನಾನು ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಅರ್ಜಿಯು ನ್ಯಾಯಾಲಯಕ್ಕೆ ನಿಗದಿತ ಸಮಯದಲ್ಲಿ ಕಳುಹಿಸಿರುವ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸರಿಸಿಕೊಳ್ಳುವಂತೆ ನಾನು ನ್ಯಾಯಾಲಯದಲ್ಲಿ ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ.

ಸ್ವಾಧೀನಪಡಿಸಿಕೊಂಡ ವರ್ಷಕ್ಕೆ ಸಂಬಂಧಿಸಿದಂತೆ ಉತಾರ ಸಲ್ಲಿಸಿರುವುದಿಲ್ಲ. ಸ್ವಾಧೀನಗೊಂಡ ಜಮೀನು ಬಡಚಿ ಗ್ರಾಮದ ವ್ಯಾಪ್ತಿಯಲ್ಲಿರುತ್ತದೆ. ಬಡಚಿ ಗ್ರಾಮದ ಖರೀದಿ ಪತ್ರಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿದ ನಿಪಿ-3 ರಿಂದ 5 ಖರೀದಿ ಪತ್ರಕ್ಕೆ ಸಂಬಂಧಿಸಿದ ಜಮೀನುಗಳು ಅಥಣಿ ಮುನ್ಸಿಪಾಲಿಟಿ ವ್ಯಾಪ್ತಿಗೆ ಬರುತ್ತವೆ ಎಂದರೆ ಸರಿ. ಸದರಿ ಜಮೀನುಗಳು ಮುನ್ಸಿಪಾಲಿಟಿ ವ್ಯಾಪ್ತಿಗೆ ಒಳಪಡುವುದರಿಂದ ಅವುಗಳ ಬೆಲೆ ಹೆಚ್ಚಿಗೆ ಇರುತ್ತವೆ ಎಂದರೆ ಸರಿ. ಸದರಿ ಖರೀದಿ ಪತ್ರಗಳು ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಬಡಚಿ ಗ್ರಾಮದ ಜಮೀನುಗಳು ಕಡಿಮೆ ಬೆಲೆಗೆ ಮಾರಾಟವಾಗಿರುತ್ತವೆ, ಆದ್ದರಿಂದ ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಹಳ್ಳಿಗಳಲ್ಲಿ ಬಡ್ಡಿಸಾಲ ಕೊಡುವ ಸಂದರ್ಭದಲ್ಲಿ ಜಮೀನುಗಳಿಗೆ ಸಂಬಂಧಿಸಿದ ಖರೀದಿ ಕರಾರು ಪತ್ರ ಮಾಡುವ ಪದ್ಧತಿ ಇರುತ್ತದೆ ಎಂದರೆ ಸರಿ. ನಿಪಿ-6 ಮತ್ತು ನಿಪಿ-7 ಖರೀದಿ ಕರಾರು ಪತ್ರಗಳು ಬಡ್ಡಿಸಾಲ ವ್ಯವಹಾರ ಸಲುವಾಗಿ ಮಾಡಿಕೊಂಡವು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-6 ಮತ್ತು ನಿಪಿ-7 ಖರೀದಿ ಕರಾರು ಪತ್ರಗಳು ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಜಮೀನು

ಸ್ವಾಧೀನಪಡಿಸಿಕೊಳ್ಳುವ 3 ವರ್ಷದ ಮೊದಲಿನ ಖರೀದಿ ಪತ್ರಗಳನ್ನು ಪರಿಗಣಿಸಿ ಸರ್ಕಾರ ನನ್ನ ಜಮೀನಿಗೆ ಸೂಕ್ತ ಪರಿಹಾರ ಕೊಟ್ಟಿದೆ ಎಂದರೆ ಸರಿಯಲ್ಲ.

ಬಡಚಿ ಗ್ರಾಮ ಅಥಣಿಯಿಂದ 4-5 ಕಿಮೀ ದೂರದಲ್ಲಿರುತ್ತದೆ. ಬಡಚಿ ಗ್ರಾಮ ಅಥಣಿಯಿಂದ 15 ಕಿಮೀ ದೂರದಲ್ಲಿದ್ದರೂ 4-5 ಕಿಮೀ ದೂರದಲ್ಲಿದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಉಳಿದ ಅರ್ಜಿದಾರರು ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ನೀಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಪ್ರತಿ ಎಕರೆಗೆ 80-100 ಟನ್ ಕಬ್ಬನ್ನು ಬೆಳೆಯುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವರ್ಷ 1 ಎಕರೆಗೆ ರೂ.2,00,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನು ಎಕರೆಗೆ ರೂ.20,00,000/- ಬೆಲೆಬಾಳುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಪ್ರಮಾಣಪತ್ರದಲ್ಲಿ ಸುಳ್ಳು ಸಂಗತಿಗಳನ್ನು ನಮೂದಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಕ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.